ಶ್ರೀ ಎಸ್. ಎಂ. ಯಾಹ್ಯಾ (ವಿಶ್ವವಿದ್ಯಾನಿಲಯ ಶಾಖೆಯ ಮಂತ್ರಿಗಳು).— ಹಾಸನ ಇಂಜಿನೀಯರಿಂಗ್ ಕಾಲೇಜ್ ವಿದ್ಯಾರ್ಥಿಗಳು ಮೊನ್ನೆ ನನ್ನನ್ನು ಭೇಟಿ ಮಾಡಿದ್ದರು, ಅವರು ಮೂರು ನಾಲ್ಕು ಡಿಮಾಂಡ್‌ಗಳನ್ನು ಇಟ್ಟಿದ್ದಾರೆ. ಅವು ಆಕಾಡೆಮಿಕ್ ಲೈಫ್‌ಗೆ ಸಂಬಂಧ ಪಟ್ಟವು. ನಾನು ಬಹಳ ಹೊತ್ತು ಅವರ ಜೊತೆ ಮಾತನಾಡಿದ್ದೇನೆ. ನಾಲ್ಕು ಡಿಮಾಂಡ್‌ಗಳಲ್ಲಿ ಒಂದು ಕ್ಯಾರಿ ಓವರ್ ಸಿಸ್ಟಮ್ ಮತ್ತು ಇನ್ನು ಉಳಿದ ಒಂದೆರಡು ಡಿಮಾಂಡ್‌ಗಳು ಇವೆ. ಇದರಲ್ಲಿ ಒಂದು ವಿಷಯ ಏನು ಎಂದರೆ ನಾವು ಸರಕಾರದವರು ನೇರವಾಗಿ ಯೂನಿವರ್ಸಿಟಿಯ ವ್ಯವಹಾರದಲ್ಲಿ ಕೈಹಾಕಲು ಬರುವುದಿಲ್ಲ. ನಮ್ಮ ವಿದ್ಯಾರ್ಥಿಗಳು ಯೂನಿವರ್ಸಿಟಿಯ ಬಗ್ಗೆ ಸರಿಯಾಗಿ ತಿಳಿದುಕೊಂಡು ಬಿಟ್ಟರೆ ಒಳ್ಳೆಯದು. ನಾವು ಅವರ ವಿಷಯದಲ್ಲಿ ನೆಗೋಷಿಯೇಟ್ ಮಾಡುವಾಗ ಒಂದು ಮೀಟಿಂಗ್ ಸ್ಪರಿ ವಿಚಾರ ಮಾಡಬೇಕಾಗುತ್ತದೆ, ನಾನು ವೈಸ್‌ಚಾನ್ಸಲರ್‌ನ್ನು ಭೇಟಿಯಾಗಬೇಕು ಸಂಪೂರ್ಣವಾಗಿ ವಿಷಯವನ್ನು ಕೂತು ಚರ್ಚೆಮಾಡಬೇಕೆಂದು ಅವರಿಗೆ ತಿಳಿಸಿದ್ದೇನೆ. ಇವತ್ತು ಮತ್ತೊಮ್ಮೆ ಫೋನ್ ಮಾಡಿ ಅವರ ನಮಸ್ಯೆಗಳನ್ನು ಬಗೆಹರಿಸಲು ಪ್ರಯತ್ನ ಮಾಡುತ್ತೇನೆ. ಸರ್ಕಾರಕ್ಕೂ ಕೂಡ ಸಹಾನುಭೂತಿ ಇದೆ ಅವರ ಸಮಸ್ಯೆಗಳೆಲ್ಲಾ ರೀಜನಬರ್ ಡಿವ್ಯಾಂಡ್ ಆಗಿದ್ದರೆ ಅದನ್ನು ಬಗೆಹರಿಸಬೇಕು ಎಂದು ಸರ್ಕಾರದ ಉದ್ದೇಶ ಕೂಡ ಇದೆ ಬೆಂಗಳೂರು ಯೂನಿವರ್ಸಿಟಿ ಮತ್ತು ಮೈಸೂರು ಯೂನಿವರ್ಸಿಟಿ ವೈಸ್‌ಚಾನ್ಸಲರ್‌ರವರು ಹೆಡ್ ಆಫ್ ಡಿಪಾರ್ಟ್‌ಮೆಂಟ್‌ನವರನ್ನು ಕರೆದು ಮೀಟಿಂಗ್ ಮಾಟಿಂಗ್ ಮಾಡುತ್ತಿದ್ದಾರೆ.

ಶ್ರೀ ಎಸ್. ಎಂ. ಶೀರ್ವಾಳಿ ಚಂದ್ರಶೇಖರ್.—ಅಧ್ಯಕ್ಷರೇ, ಬೆಂಗಳೂರು ಯೂನಿವರ್ಸಿಟಿಗೆ ಸೇರಿರತಕ್ಕ-ಧಾರವಾಡಗರೆ ಇಂಜಿನಿಯರಿಂಗ್ ಕಾಲೇಜ್‌ನವರು ಕೂಡ ಸತ್ಯಾಗ್ರಹ ನಡೆಯಿಸುತ್ತಿದ್ದಾರೆ. ಅದು ಕೂಡ ನಿಮ್ಮ ಸರ್ಕಾರದ ನೇರ ಜವಾಬ್ದಾರಿಯಲ್ಲದೆ, ಅದರ ಬಗ್ಗೆ ತಾವು ಏನು ಪರಿಹಾರ ಕಂಡು ಹಿಡಿದಿದ್ದೀರಿ ?

ಶ್ರೀ ಎಸ್. ಎಂ, ಯಾಹ್ಯಾ — ಕಾಲೇಜ್ ಯಾರಿಗೇ ಸೇರಿರಲಿ, ಅದು ಏಡೆಡ್ ಆಗಿರಲಿ, ಆನ್ ಏಡೆಡ್ ಕಾಲೇಜ್ ಆಗಿರಲಿ ಸಮಸ್ಯೆಗಳೆಲ್ಲಾ ಒಂದೇ, ಇದು ಅಕಾಡೆಮಿಕ್‌ಗೆ ಸಂಬಂಧಪಟ್ಟಿರತಕ್ಕಂಥ ಪ್ರಶ್ನೆಯಾಗಿರುವುದರಿಂದ ಯೂನಿವರ್ಸಿಟಿಯ ವೈಸ್ ಚಾನ್ಸಲರ್‌ಗಳವರು ಮೀಟಿಂಗ್ ಮಾಡುತ್ತಿದ್ದಾರೆ.

ಶ್ರೀ ಕೆ ಎಚ್, ಹನುಮೇಗೌಡ.—ಸ್ವಾಮಿ, ಒಂದೊಂದು ಯೂನಿವರ್ಸಿಟಿಯವರು ಒಂದು ರೀತಿಯಲ್ಲಿ ಫೀಜನ್ನು ವಸೂಲಿ ಮಾಡುತ್ತಿದ್ದಾರೆ. ಆದುದರಿಂದ ತಾವು ಎಲ್ಲಾ ಯೂನಿವರ್ಸಿಟಿಗಳಲ್ಲೂ ಫೀಜ್ ಒಂದೇ ಇರುವ ಹಾಗೆ ಮಾಡಬೇಕಾದ್ದು ನೂಕ್ಕ...No Answer

Business of the houses

ಅಧ್ಯಕ್ಷರು.— ನನ್ನ ಹತ್ತಿರ ಇನ್ನು 20 ಹೆಸರುಗಳು ಇವೆ, ಅವರೆಲ್ಲಾ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವವರಿದ್ದಾರೆ ಆದುದರಿಂದ ದಯವಿಟ್ಟು ಮಾನ್ಯ ಸದಸ್ಯರು ಹೆಚ್ಚಿನ ವಿಷಯವಿದ್ದರೆ ಮಂತ್ರಿಗಳ ಹತ್ತಿರ ಹೋಗಿ ಮಾತನಾಡಬಹುದು.

Sri K.H. Patil, Hon,ble Minister for Food and Forests wanted to make a Statement. He can do so.

STATEMENT OF THE MINISTER FOR FOOD AND FORESTS

re. Forest Privilages

SRI K.H PATIL (Minister for Food and Forests).—Madam Speaker I wish to make the following statement :

I had expressed while answering a L.A. Question on 29-3-1977 that I would make a statement on the Forest Privileges both to remove the doubts that may exist in the minds of the Members as also to give publicity to this subject.

Forest Privileges covering the various parts of the State are either as specifically conceded by Government at different times or as recorded at the time of settlement of the forest area. In Malnad area, the following items can be removed by villagers from District Forest free of charge:—

Junglewood from mature trees, Bamboos, Vate and Reeds for cattle sheds, huts, sandals, matchans and agricultural implements.

Junglewood stakes, Brushwood and bamboo thorns for fences and hedges.

Green leaf and grass

Dry fuel for domestic use.

Gross can be harvested from the Reserve Forests also free of charge with permission. Dry fuel can also be removed from Reserve Forests for domestic consumption on Head-loads free of cost in case of families whose income does not exceed Rs. 1,200 per annum. Stone, earth and fallen leaves, for domestic or agricultural use can also be taken from the specified Reserve Forest free of charge.

Timber upto 140 cft, for house construction, enovation or extension is made available once in five years per family, the annual income of which doesnot exceed Rs. 1,200/- per annum at concession rate from the nearest Government depots. The rate varies from Rs. 3-50 to Re. 1 per cft.

Firewood up 5 cartloads per year, to the above category of persons is made available at concession rate of Rs. 2-50 per cartload. The annual income certificate furnished by the person himself will be accepted by the Department.

In the case of Non-Malnad areas a few concessions have been made available covering limited and specified zones. These concessions are of minor nature such as permitting the removal of Karvi, thorns, etc., at prescribed charges.

ಶ್ರೀ ಕೆ. ಎಚ್. ಹನುಮೇಗೌಡ —ರೈತರು ವ್ಯವಸಾಯ ಉಪಕರಣಗಳಿಗೆ ಬೇಕಾದಂಥ ಮರ ಮುಟ್ಟುಗಳನ್ನು ಮಾಡಿಕೊಳ್ಳಲು ತನ್ನ ಸ್ವಂತ ಜಮೀನಿನಲ್ಲಿ ಕಡಿದು ಕೊಳ್ಳಲು ಅವಕಾಶ ಕೊಟ್ಟಿದ್ದರೆ ಬಹಳ ಅನುಕೂಲವಾಗುತ್ತಿತ್ತು. ಆದುದರಿಂದ ತಾವು ಇದರ ಬಗ್ಗೆ ಈಗಿರತಕ್ಕಂಥ ಕಾಯಿದೆಗೆ ಸ್ವಲ್ಪ ತಿದ್ದುಪಡಿಯನ್ನು ತಂದಿದ್ದರೆ ಅನುಕೂಲವಾಗುತ್ತಿತ್ತೆ ಎಂದು ನಾನು ಹೇಳಬಯಸುತ್ತೇನೆ ಸ್ವಾಮಿ.

ಶ್ರೀ ಕೆ. ಎಚ್. ಪಾಟೀಲ್.—ಮಲೆನಾಡು ಪ್ರದೇಶ ಯಾವುದು ಯಾವುದು, ಆಲ್ಲೆಲ್ಲಾ ಮನೆ ಕಟ್ಟುವುದಕ್ಕಾಗಲೀ, ಅಥವಾ ರಿಪೇರಿ ಮಾಡಿಕೊಳ್ಳುವುದಕ್ಕಾಗಲೀ ಅವರು ಪರ್ಮಿಷನ್ ತೆಗೆದು ಕೊಂಡು ಮಾಡಬಹುದೆಂದು ಟ್ರಿ ಪ್ರಿಜರ್ವೇಷನ್ ಆಕ್ಟ್‌ನಲ್ಲಿ ಈಗಾಗಲೇ ಮಾಡಿದ್ದೇವೆ. 70 ಕ್ವಿಂಟಾಲ್‌ವರೆಗೆ ಆದರೆ ಯಾವುದೇ ರೀತಿಯ ಪರವಾನಿಗೆ ಜರೂರು ಇಲ್ಲ. ಆದರೆ ಒಂದೂವರೆ ಟನ್ ಗಿಂತ ಜಾಸ್ತಿಯಾದರೆ ಪರ್ಮೀಷನ್‌ನ್ನು ತೆಗೆದುಕೊಳ್ಳಬೇಕಾಗುತ್ತದೆ. ಅದನ್ನು ಕೂಡ ತಾವು ಹೆಚ್ಚು ಮಾಡಬೇಕು ಎಂದು ಹೇಳಿದರೆ ಅದನ್ನೂ ವಿಚಾರ ಮಾಡುತ್ತೇನೆ.

ಶ್ರೀ ವಿ.ಎನ್. ಪಾಟೀಲ್.—5 ಟನ್ ವರೆಗೆ ಮಾಡಿ

ಶ್ರೀ ಕೆ. ಎಚ್. ಪಾಟೀಲ್. —ಅದರಲ್ಲಿ ನನ್ನ ಆಭ್ಯಂತರವೇನೂ ಇಲ್ಲ. ಇದರ ಬಗ್ಗೆ ತಿದ್ದುಪಡಿ ತಂದಾಗ ಈ ಸಭೆಯ ಎದುರಿಗೆ ಇಡುತ್ತೇನೆ.

ಶ್ರೀ ಕೆ. ಎಚ್. ಹನುಮೇಗೌಡ —ಸ್ವಾಮಿ ತಾವು ಈಗ ಮಾಡಿರತಕ್ಕಂಥ ಆಜ್ಞೆಗಳನ್ನು ಗ್ರಾಮಗಳಿಗೆ ಮುಟ್ಟುವುದೇ ಇಲ್ಲ ಆದುದರಿಂದ ಇದರ ಬಗ್ಗೆ ತಾವು ಸೂಕ್ತ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಕೆ. ಎಚ್ ಪಾಟೀಲ್.—ಪ್ರತಿಯೊಂದು ಕಾನೂನು ಮಾಡಿದಾಗಲೂ ಕೂಡ ಅದು ಗೆಜಿಟ್‌ನಲ್ಲಿ ನೋಟಿಫೈ ಆಗುತ್ತದೆ. ಮಾನ್ಯ ಸದಸ್ಯರುಗಳೂ ಕೂಡ ಇದರ ಬಗ್ಗೆ ಸಾಕಷ್ಟು ಪ್ರಚಾರವನ್ನು ಗ್ರಾಮಗಳಲ್ಲಿ ಮಾಡಿದರೆ ಬಹಳ ಉಪಕಾರವಾಗುತ್ತದೆ.

ಶ್ರೀ ಬಿ ವಿ. ಕಕ್ಕಿಲಾಯ. —ಸ್ವಾಮಿ, ಮಲೆನಾಡು ಎಂದರೆ ದಕ್ಷಿಣ ಕನ್ನಡ ಜಿಲ್ಲೆ ಎರಡನ್ನೂ ಬರುತ್ತದೆಯೇ ?

ಶ್ರೀ ಕೆ. ಎಚ್. ಪಾಟೀಲ್.—ಮಲೆನಾಡು ಪ್ರಾಂತ ಮತ್ತು ಫಾರೆಸ್ಟ್ ಸುತ್ತ ಮುತ್ತಲಿರತಕ್ಕಂಥ ಪ್ರದೇಶಗಳಿಗೆಲ್ಲಾ ಈ ರೂಲ್ ಅನ್ವಯವಾಗುತ್ತದೆ.

ಶ್ರೀ ಕೋಣಂದೂರು ಲಿಂಗಪ್ಪ.—ಸ್ವಾಮಿ, 5 ಕಾರ್ಟ್ ಲೋಡ್ ಮಲೆನಾಡು ಪ್ರದೇಶದ ವರೆಗೆ ಏನೂ ಸಾಕಾಗುವುದಿಲ್ಲ. ಮಲೆನಾಡು ಪ್ರದೇಶದಲ್ಲಿರುವವರು ಸಾಮಾನ್ಯವಾಗಿ ಮಳೆಗಾಲಕ್ಕಿಂತ ಮುಂಚಿತವಾಗಿ ತಮಗೆ ಮುಂದೆ ಬೇಕಾಗತಕ್ಕಂಥ ಸೌದೆಯನ್ನು ಕೂಡಿ ಹಾಕಿ ಕೊಳ್ಳುತ್ತಾರೆ. ಆದುದರಿಂದ ಅವರಿಗೆ ಬೇಕಾದಷ್ಟು ಸೌದೆಯನ್ನು ಕೂಡಿಸಿ ಕೊಳ್ಳುವುದಕ್ಕೆ ತಾವು ಏನಾದರೂ ಅವಕಾಶವನ್ನು ಕಲ್ಪಿಸಿ ಕೊಡುತ್ತೀರಾ ?

ಶ್ರೀ ಎಸ್. ಬಂಗಾರಪ್ಪ.—ಸ್ವಾಮಿ, ತಾವು ಈ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸಿನಿಂದ ಫ್ರೀ ಆಫ್ ಚಾರ್ಜ್‌ನಲ್ಲಿ ಕೆಲವೊಂದು ಐಟಂಗಳನ್ನು ತೆಗೆದುಕೊಂಡು ಹೋಗಬಹುದೆಂದು ಏನು ಹೇಳಿಕೆಯನ್ನು ಕೊಟ್ಟಿದ್ದೀರಿ, ಅದಕ್ಕಾಗಿ ನಾನು ತಮ್ಮನ್ನು ಹೃದಯ ಪೂರ್ವಕವಾಗಿ ಸ್ವಾಗತ ಮಾಡುತ್ತೇನೆ. ಆದರೆ ಇದರ ಜೊತೆಗೆ ಚಿಕ್ಕದಾಗಿ ಮನೆ ಕಟ್ಟತಕ್ಕಂಥವರು ಮೇಲ್ಗಡೆ ಚಿಕ್ಕ ಚಿಕ್ಕ ಬೊಂಬುಗಳನ್ನು ಇಟ್ಟು ಮೇಲ್ಗಡೆ ಹೆಂಚನ್ನು ಹಾಕಿ ಮನೆ ಕಟ್ಟಿ ಕೊಳ್ಳುತ್ತಾರೆ. ಅಂಥವರಿಗೆ ಅನುಕೂಲವಾಗಲು ಅದನ್ನು ಸಹ ಕೊಟ್ಟಿದ್ದರೆ ಬಹಳ ಅನುಕೂಲವಾಗುತ್ತಿತ್ತು. ತಾವು ಬರೀ ಹಟ್ಸ್ ಎಂದು ಹೇಳಿದ್ದೀರಿ. ಅದೇ ರೀತಿ ಸ್ಮಾಲ್ ಹೌಸ್‌ಗಳನ್ನು ಕಟ್ಟಿಕೊಳ್ಳಲು ಅನುಕೂಲವಾಗುವಂತೆ ತಾವು ಈಗ ಮಾಡಿರತಕ್ಕಂಥ ಸ್ಕೀಮ್‌ನಲ್ಲಿ ಅದೂ ಕೂಡ ಸೇರಿಸಿದರೆ ಒಳ್ಳೆಯದೆಂದು ಹೇಳಬಯಸುತ್ತೇನೆ.

ಶ್ರೀ ಕೆ. ಹೆಚ್, ಪಾಟೀಲ್.— ಮೊದಲು ಈ ರೂಲ್ಸ್ ಮಾಡುವಾಗಲೇ ಇದನ್ನೆಲ್ಲಾ ಅವರು ಯೋಚನೆ ಮಾಡಿದ್ದಾರೆ ಆದರೂ ಕೂಡ ಅದನ್ನು ಇಂಪ್ಲಿಮೆಂಟ್ ಮಾಡುವಾಗ ಮಾನ್ಯ ಸದಸ್ಯರು ಹೇಳುವಂತ ಅಭಿಪ್ರಾಯಗಳನ್ನೂ ಹಾಗೂ ನಮ್ಮ ಅನುಭವದಲ್ಲಿ ಅಂದರೆ ಇದನ್ನು ಇಂಪ್ಲಿಮೆಂಟ್ ಮಾಡುವಾಗಿನ ತೊಂದರೆಗಳೆಲ್ಲವನ್ನೂ ನೋಡಿ ಎಂ. ಪಿ. ರೂಲ್ಸ್‌ನಲ್ಲಿ ಅಳವಡಿಸುವುದಕ್ಕೆ ವಿಚಾರ ಮಾಡೋಣ.

Strike by Engineering and Medical College Students

2-00 ಪಿ.ಎಂ.

ಶ್ರೀ ಹೆಚ್. ಡಿ. ದೇವೇಗೌಡ —ಮಾನ್ಯ ಸಭಾಧ್ಯಕ್ಷರೆಯವರೇ, ಕಾರ್ಯಕಲಾಪಗಳ ಸಲಹಾ ಸಮಿತಿಯ ನಿರ್ಣಯದಂತೆ ನಾಳೆ ಈ ಸಭೆ ಮುಂದಕ್ಕೆ ಹೋಗಿ ಮತ್ತೆ 18ಕ್ಕೆ ಸೇರುತ್ತದೆ. ಆದ್ದರಿಂದ ಒಂದು ಪ್ರಮುಖವಾದ ವಿಚಾರವನ್ನು ಸರ್ಕಾರದ ಗಮನಕ್ಕೆ ತರಲಿಕ್ಕೆ ಇಚ್ಛೆಪಡುತ್ತೇನೆ. ಇಂಜಿನಿಯರಿಂಗ್ ಮತ್ತು ಮೆಡಿಕಲ್ ಕಾಲೇಜ್‌ನ ಹುಡುಗರ ಬೇಡಿಕೆಗಳ ಬಗ್ಗೆ ನಾಳೆ ಹುಡುಗರನ್ನು ಕಂಡು ಅವರ ಜೊತೆ ಚರ್ಚೆ ಮಾಡಿ, ನಿರ್ಣಯ ಮಾಡುತ್ತೇವೆಂದು ಹೇಳಿದ್ದರು. ಅಂತಿಮ ನಿರ್ಣಯದ ಬಗ್ಗೆ ಹೇಳಿಕೆ ಕೊಡಬೇಕೆಂದು ತಮ್ಮ ಸಮ್ಮುಖದಲ್ಲಿಯೇ ಮನವಿ ಮಾಡಿದ್ದೆವು. ನಾಳೆ ದಯಮಾಡಿ ಎಷ್ಟು ಬೇಡಿಕೆಗಳನ್ನು ಮಾನ್ಯತೆ ಮಾಡುವುದಕ್ಕೆ ಆಗುತ್ತದೆ ಎಂಬುದನ್ನು ತಿಳಿಸಬೇಕು